# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಸಿ.ಆರ್.10/2006-07 ದಿನಾಂಕ:08-12-2006

**-:: ಮರು ಟೆಂಡರ್ ಪ್ರಕಟಣೆ ::-**

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಚೆಯುಳ್ಳವರು ತಮ್ಮ ಶೇಕಡವಾರು ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಲಕೋಟೆಯ ಮೇಲೆ ಕಾಮಗಾರಿ ಹೆಸರನ್ನು ನಮೂದಿಸಿ ಸೀಲ್ ಮಾಡಿದ ಲಕೋಟೆಯಲ್ಲಿಟ್ಟು, ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರಿಗೆ ದಿನಾಂಕ:28-12-2006ರಂದು ಸಂಜೆ 4.00ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಿದೆ. ಹಾಗೂ ಷರತ್ತುಗಳು ಕಛೇರಿಯ ನಾಮಫಲಕದಲ್ಲಿ ಮತ್ತು ಜಿಲ್ಲಾ ಟೆಂಡರ್ ಬ್ಯುಲೆಟಿನ್‌ನಲ್ಲಿ ಪ್ರಕಟಿಸಿರುವಂತೆ, ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಬಹುದು.

1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ: 23-12-2006
2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 26-12-2006
3) ಭರ್ತಿ ಮಾಡಿದ ಟೆಂಡರ್ ಫಾರಂ ಶುಲ್ಕ ರೂ.500/-ಗಳು (ಮಾರಾಟ ಶುಲ್ಕ ಸೇರಿ)
4) ಪ್ರತಿ ಕಾಮಗಾರಿ ಮುಗಿಸಲು ನೀಡಿರುವ ಕಾಲಾವಧಿ : 3ತಿಂಗಳು

**ನಗರಸಭಾ ನಿಧಿಯಲ್ಲಿ ನಿರ್ವಹಿಸಬೇಕಾಗಿರುವ ಕಾಮಗಾರಿಗಳು:**

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | ಕೊಂಗಾಡಿಯಪ್ಪ ರಸ್ತೆಯಲ್ಲಿ ರಾಜು ಕಾಂಪ್ಲೆಕ್ಸ್‌ನಿಂದ ತಾಲ್ಲೂಕು ಕಛೇರಿವರೆಗೂ ರಸ್ತೆ ಸುಧಾರಿಸುವುದು ಹಾಗೂ ಮೆಟಲಿಂಗ್ ಮಾಡುವ ಕಾಮಗಾರಿ. | 8,50,000.00 | 17,500.00 |
| 2 | ಡಿ. ಕ್ರಾಸ್ ಗೆ ಹೋಗುವ ರಸ್ತೆ ಎಡಭಾಗದಲ್ಲಿ ಬಾಕ್ಸ್ ಟೈಪ್ ಚರಂಡಿಯನ್ನು ನಿರ್ಮಿಸುವ ಕಾಮಗಾರಿ. | 3,50,000.00 | 8,750.00 |

**12ನೇ ಹಣಕಾಸು ನಿಧಿಯಡಿಯಲ್ಲಿ ನಿರ್ವಹಿಸಬೇಕಾಗಿರುವ ಕಾಮಗಾರಿಗಳು:**

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | ಘನ ತ್ಯಾಜ್ಯ ವಸ್ತು ವಿಲೇವಾರಿ ಸಲುವಾಗಿ ಪ್ಲಾಟ್‌ಫಾರಂಗಳನ್ನು ನಿರ್ಮಿಸುವ ಕಾಮಗಾರಿ. | 1,15,000.00 | 2,875.00 |
| 2 | ಘನ ತ್ಯಾಜ್ಯ ವಸ್ತು ವಿಲೇವಾರಿ ವಾಹನಗಳು ಮತ್ತು ನಗರಸಭೆ ವಾಹನಗಳಿಗಾಗಿ ಶೆಲ್ಟರ್ ಹಾಗೂ ಉಗ್ರಾಣ ನಿರ್ಮಾಣ ಕಾಮಗಾರಿ. | 6,50,000.00 | 13,000.00 |

**ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:**

1) ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಮತ್ತು ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಕಟ್ಟುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
2) ಪಿ.ಡಬ್ಲ್ಯೂ.ಡಿ 65(ಎ) ಮತ್ತು 66ರ ಷರತ್ತುಗಳನ್ನು ಪಾಲಿಸತಕ್ಕದ್ದು.
3) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭ, ಪ್ರಗತಿ, ಮುಕ್ತಾಯದ ಹಂತದ ಪೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,
4) ಟೆಂಡರ್ ಅನುಮೋದಿತ ಗುತ್ತಿಗೆದಾರರು ಕರಾರು ಪತ್ರ ಬರೆದುಕೊಟ್ಟ ಮೂರು ದಿನಗಳ ಒಳಗಾಗಿ ಕಾರ್ಯಾದೇಶವನ್ನು ಪಡೆಯುವುದು. ಮತ್ತು ಕಾರ್ಯಾದೇಶವನ್ನು ನೀಡಿದ ದಿನಾಂಕವೇ ಕಾಮಗಾರಿಯ ಹಸ್ತಾಂತರಿಸಿದ ದಿನಾಂಕವೆಂದು ತಿಳಿಯುವುದು.
5) ಎಸ್.ಆರ್. ದರಕ್ಕಿಂತ ಕಡಿಮೆ ದರವನ್ನು ನಮೂದಿಸುವವರು ವ್ಯತ್ಯಾಸದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಗಳಿಂದ ಪಡೆದ ಡಿ.ಡಿ.ಯನ್ನು ಪೌರಾಯುಕ್ತರವರ ಹೆಸರಿನಲ್ಲಿ ಭರ್ತಿ ಮಾಡಿದ ಟೆಂಡರ್ ಫಾರಂಗಳ ಜೊತೆ ಸಲ್ಲಿಸುವುದು.
6) ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
7) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

**ಸಹಿ:-**
**ಅಧ್ಯಕ್ಷರು,**
ನಗರಸಭೆ, ದೊಡ್ಡಬಳ್ಳಾಪುರ.

**ಸಹಿ:-**
**ಪೌರಾಯುಕ್ತರು,**
ನಗರಸಭೆ, ದೊಡ್ಡಬಳ್ಳಾಪುರ.